ಮನಸ್ಸು ತುಂಬಾ ತವಕಿಸುತ್ತಿದೆ, ಆದರೆ ನೀನೆಲ್ಲಿದ್ದೀಯ ಎಂದೇ ತಿಳಿಯುವುದಿಲ್ಲ...'

ಬಾ ಅವರ ಈ ಮಾತುಗಳನ್ನು ಹರಿಲಾಲ ಓದಿದ್ದ, ಆದರೆ ಈಗ ಕಣ್ಣುಗಳು ಸ್ವಲ್ಪ ಮುಚ್ಚಿಕೊಂಡರೂ, ಬಾ ಅವರೇ ಸ್ವತಃ ಮಾತನಾಡುತ್ತಿದ್ದಾರೆ ಎಂದು ಅನ್ನಿಸುತ್ತಿತ್ತು. ಅವರ ಮಾತುಗಳು ಪದೇಪದೇ ಕೇಳಿಸುತ್ತಿದ್ದವು. ಹರಿಲಾಲ ತಡಬಡಿಸಿ ಎದ್ದು ಕೂರುತ್ತಿದ್ದ. ಅಕ್ಕಪಕ್ಕ ನಾಲ್ಕು ಗೋಡೆಗಳ ಮಧ್ಯೆ ಗಾಢ ಅಂಧಕಾರವಿತ್ತು.

ಹರಿಲಾಲ ಮನಸ್ಸನ್ನು ಗಟ್ಟಿಮಾಡಿಕೊಂಡು ಎದ್ದು ಕೂತ. ಕತ್ತಲಿಗೆ ಭಯಪಡುವವನಂತೆ ದೀಪವನ್ನು ಹೊತ್ತಿಸಿದ. ನಂತರ ಬೆಳಕಿನಲ್ಲಿ ಕೈ ಕಾಲುಗಳನ್ನು ಮುದುಡಿ ಮಲಗಿದ. ಕಣ್ಣುಗಳನ್ನು ತೆರೆದು ಎದುರಿನ ಗೋಡೆಯಲ್ಲಿದ್ದ ತನ್ನ ನೆರಳನ್ನೂ ಸಹ ಅವನು ನೋಡಲಿಲ್ಲ.

***

ಮರುದಿನ ಅವನು ಕಾನ್ಪುರದಿಂದ ಹೊರಟ. ಆದರೆ ಯಾಕೋ, ಏನೋ ಅವನಿಗೆ ಇಸ್ಲಾಮ್ ಧರ್ಮ ಪ್ರಚಾರದ ಡೋಲು ಬಾರಿಸುವ ಕೆಲಸ ಒಮ್ಮೆಲೆ ನೀರಸ ಮತ್ತು ವ್ಯರ್ಥವೆಂದು ತೋರಿತು. ಅವನು ಮತಾಂತರ ಹೊಂದಿದ ದಿನ ಪರಿವಾರದ ಬಗ್ಗೆ, ವಿಶೇಷವಾಗಿ ಬಾಪೂ ಅವರ ಬಗ್ಗೆ ಸೇಡಿನ ಭಾವನೆಯನ್ನು ಹೊಂದಿದ್ದ; ಆದರೆ ಅದು ಎಂದೋ ಅಳಿಸಿ ಹೋಗಿತ್ತು. ಎಂದೂ ಸಾಮಾನ್ಯ ಮಾತುಕತೆಯಲ್ಲೂ ಹೇಳದ ಮಾತುಗಳನ್ನು ಈ ದಿನಗಳಲ್ಲಿ ಸಾರ್ವಜನಿಕರೆದುರು ಹೇಳಿದ್ದ. ಮತಾಂತರದ ವೇಳೆಯಲ್ಲಿ ಜಕಾರಿಯಾ ಸಾಹೇಬರು ತೋರಿದ್ದ ಉತ್ಸಾಹ, ಈಗ ಮಂದವಾಗಿತ್ತು. ಇದು ಈಗ ಹರಿಲಾಲನಿಗೆ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಅವನ ಅಗತ್ಯತೆಗಳು ಪೂರ್ಣಗೊಳ್ಳುತ್ತಿದ್ದವು, ಆದರೆ ಈಗ ಅವನೊಂದಿಗೆ ಅಸಡ್ಡೆಯಿಂದ ವರ್ತಿಸಲಾಗುತ್ತಿದೆ ಎಂದು ತಿಳಿಯಲು ತಡವಾಗಿರಲಿಲ್ಲ. ಅವನು ಮುಸಲ್ಮಾನನಾದ ನಂತರ ಅವನಿಗೆ ಮತ್ತೆ ವಿವಾಹವನ್ನು ಮಾಡಲಾಗುವುದೆಂಬ ಆಸೆಯನ್ನು ತೋರಿಸಲಾಗಿತ್ತು. ಆದರೆ ಅದನ್ನು ಎಲ್ಲರೂ ಮರೆತಂತಿತ್ತು. ತಾನು ಮುಸಲ್ಮಾನನಾದ ಕೂಡಲೇ, ಅಬ್ದುಲ್ಲಾ ಆದ ಕೂಡಲೇ ತನಗೆ ಬೇಕಾದಷ್ಟು ಹಣ ಸಿಗುವುದು ಎಂಬ ಇಚ್ಛೆಯೂ ಈಡೇರಿರಲಿಲ್ಲ. ಹರಿಲಾಲ ಈ ವಿಷಯವನ್ನು ನೆನಪಿಸಲು ಅದೆಷ್ಟೋ ಬಾರಿ ಪ್ರಯತ್ನಿಸಿದ್ದ, ಆದರೆ ಅವನ ಆಸೆಯನ್ನು ಅಷ್ಟೇ ಚಾತುರ್ಯದಿಂದ ಬದಿಗೆ ತಳ್ಳಲಾಗಿತ್ತು.

ಇದು ಸಾಕಾಗದೆ, ಸಾಂಪ್ರದಾಯಿಕ ವೈಮನಸ್ಸಿನ ಆ ದಿನಗಳಲ್ಲಿ ಹಿಂದೂ ದೇವಸ್ಥಾನವೊಂದರ ಮೇಲೆ ಆಕಸ್ಮಿಕ ಆಕ್ರಮಣವೆಸಗಿ ಅದನ್ನು ಒಡೆದು ಹಾಕುವ ಷಡ್ಯಂತ್ರವನ್ನು ಹರಿಲಾಲನ ಉಪಸ್ಥಿತಿಯಲ್ಲಿ ರಚಿಸಲಾಯಿತು; ಇದರಿಂದ ಹರಿಲಾಲ ಹೈರಾಣಾಗಿದ್ದ. ಸಂಘರ್ಷಣೆಯ ಆ ದಿನಗಳಲ್ಲಿ ಇರಡೂ ಗುಂಪುಗಳ ನಡುವೆ ಇಂಥ ಘಟನೆಗಳು ಸಂಭವಿಸುತ್ತಿದ್ದಾಗ್ಯೂ, ಅನೇಕ ಮುಸಲ್ಮಾನರು ಇಂಥ ಕಾರ್ಯಗಳಲ್ಲಿ ಹರಿಲಾಲನನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿದ್ದರು, ಆಗ ಹರಿಲಾಲನಿಗೂ ಸಹ ಇದು ಸ್ವಲ್ಪ ಕಷ್ಟವೆನಿಸಿತ್ತು.

'ಮಿಯಾ ಅಬ್ದುಲ್ಲಾ! ಈ ನಾಸ್ತಿಕರ ದೇವಸ್ಥಾನದ ಮೇಲೆ ಮೊದಲ ಆಕ್ರಮಣ ನಿನ್ನ ಕೈಯಿಂದಾದರೆ, ಸೋಮನಾಥದ ಮೇಲೆ ಮುಹಮ್ಮದ್ ಗಜನಿಯಂಥ ಮೂರ್ತಿ ಭಂಜಕನ ಗೆಲುವಿನ ನಂತರದ ದೊಡ್ಡ ಗೆಲುವೆಂದು ಹೇಳಲಾಗುವುದು...' ಸಂಗಡಿಗರು ಹರಿಲಾಲನಿಂದ ಸಂಪೂರ್ಣ ಲಾಭವನ್ನು ಪಡೆಯಲು ನಿಶ್ಚಯಿಸಿದ್ದರು.

'ಸಹೋದರರೇ!' ಹರಿಲಾಲ ಸ್ವಲ್ಪ ಹೊತ್ತಿನ ನಂತರ ಮೌನವನ್ನು ಮುರಿದ, 'ಇಸ್ಲಾಮ್‌ನಲ್ಲಿ ಹಜರತ್ ಖಲೀಫಾ ಉಮರರು ಬೇರೆ ಧಾರ್ಮಿಕ ಸ್ಥಳಗಳನ್ನು ಧ್ವಂಸ ಮಾಡಲು ಆದೇಶಿಸಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಈಗ ದೇಶದೆದುರು ಇದು ದೊಡ್ಡ ಪ್ರಶ್ನೆಯಲ್ಲ...'

'ಅಬ್ದುಲ್ಲಾ, ನೀವು ಮೌಲ್ವಿಯಾಗಿ ಇಂಥ ಮಾತನಾಡುತ್ತಿದ್ದೀರ?' ಸಂಗಡಿಗರಿಗೆ ಹರಿಲಾಲ ಹೀಗೆ ಹೇಳುತ್ತಾನೆಂಬ ನಂಬಿಕೆ ಇರಲಿಲ್ಲ. ಅವರ ಕಣ್ಣುಗಳಲ್ಲಿ ಸಂದೇಹ ಮೂಡಿತು, 'ಧರ್ಮಕ್ಕಾಗಿ ನೀವು ನಿಮ್ಮ ಜೀವನವನ್ನೇ ಕೊಡುವುದಾಗಿ ಹೇಳಿದ್ದಿರಿ, ಈಗ ಅದರ ಅರ್ಥವೇನು? ಇಸ್ಲಾಮ್‌ಗಾಗಿ ಕೆಲಸಗಳನ್ನು ಮಾಡುತ್ತಾ ಸಾಯುವ ಬಗ್ಗೆ ಹೇಳಿದ್ದು ಮರೆತಿರ?'

'ನಾನು ಯಾವುದನ್ನೂ ಮರೆತಿಲ್ಲ...ನನಗೆಲ್ಲವೂ ನೆನಪಿದೆ...' ಹೀಗೆಂದು ಹರಿಲಾಲ ಎದ್ದು ನಿಂತ, 'ಆದರೆ...ಆದರೆ...ಈ ಕೆಲಸದಲ್ಲಿ ಧರ್ಮವಿದೆ ಎಂದು ನನಗೆ ಅನ್ನಿಸುವುದಿಲ್ಲ.'

* * *

ಈ ನಡುವೆ ಹರಿಲಾಲನ ಮತಾಂತರದಿಂದ ಮುಸ್ಲಿಮ್ ಸಂಘಟನೆ ಎಷ್ಟು ಉತ್ಸಾಹದಲ್ಲಿತ್ತೋ, ಈಗ ಈ ಪರಿವರ್ತನೆಯಿಂದಾಗಿ ಅವರೇ ಸೋಲುತ್ತಿದ್ದಾರೆ ಎಂದು ಭಾಸವಾಗುತ್ತಲೇ ಆರ್ಯಸಮಾಜ ಮತ್ತು ಇನ್ನಿತರ ಹಿಂದೂ ಸಂಘಟನೆಗಳು ಮತ್ತೆ ಸಕ್ರಿಯಗೊಂಡವು.

ಬಾ ಅವರ ಬಹಿರಂಗ ಪತ್ರ ಪತ್ರಿಕೆಗಳಲ್ಲಿ ಪ್ರಕಟಗೊಂಡ ದಿನದಿಂದ ಆರ್ಯಸಮಾಜದ ಸಂಘಟನೆಯು ಹರಿಲಾಲನೊಂದಿಗೆ ಸಂಪರ್ಕಿಸಿತ್ತು; ಉತ್ತರದ ರೂಪದಲ್ಲಿ ಯಾವ ವಿಧದಲ್ಲಿ ಆಕ್ರಮಣ ಮಾಡಬೇಕೆಂಬುದರ ಬಗ್ಗೆ ಯುಕ್ತಿಯನ್ನು ಯೋಚಿಸಲಾಗುತ್ತಿತ್ತು. ಹರಿಲಾಲ ಕಾನ್‌ಪುರದಿಂದ ದಿಲ್ಲಿಗೆ ಬಂದಾಗ ಆರ್ಯಸಮಾಜದ ಅನೇಕ ಹಿಂದೂಗಳು ಯಾರಿಗೂ ತಿಳಿಯದಂತೆ ಹರಿಲಾಲನನ್ನು ಭೇಟಿಯಾಗಿ, ಅವನು ಮತ್ತೆ ಮತಾಂತರ ಮಾಡಿ ಹಿಂದೂ ಧರ್ಮಕ್ಕೆ ಮರಳಿ ಬರುವಂತೆ ಸಂಜ್ಞೆ ಕೊಟ್ಟರು.

ಬಾ ಅವರ ಆ ಪತ್ರದಿಂದ ಹರಿಲಾಲನ ಮನಸ್ಸಿನಲ್ಲಿ ಅವನಿಗೇ ಅರಿವಿಲ್ಲದಂತೆ ಎದ್ದಿದ್ದ ವ್ಯಾಕುಲತೆಯಲ್ಲಿ, ದೇವಸ್ಥಾನವನ್ನು ಧ್ವಂಸ ಮಾಡುವ ಷಡ್ಯಂತ್ರವೂ ಇತ್ತು. ಇದರಿಂದ ಹರಿಲಾಲ ಮತ್ತೂ ಸ್ವಲ್ಪ ವ್ಯಗ್ರನಾಗಿದ್ದ. ಅಲ್ಲದೆ ಜುಮಾ ಮಶೀದಿಯಲ್ಲಿ ಮೊದಲ ದಿನ ಅವನ ಶೌರ್ಯಕ್ಕೆ ಸನ್ಮಾನ ನಡೆದಿತ್ತು, ಈಗ ಅದು ಲೇಶಮಾತ್ರವೂ ಗೋಚರಿಸುತ್ತಿರಲಿಲ್ಲ. ಪ್ರತಿಯಾಗಿ, ಅವನು ಆ ಷಡ್ಯಂತ್ರದಲ್ಲಿ ಭಾಗವಹಿಸದಿದ್ದಾಗ ಅವನ ಸಂಗಡಿಗರು ಅವನೊಂದಿಗೆ ಅಸ್ಪೃಶ್ಯರಂತೆ ವ್ಯವಹರಿಸಲು ಆರಂಭಿಸಿದ್ದರು. ಇವೆಲ್ಲದರಿಂದ ಹರಿಲಾಲ ಕಂಗೆಟ್ಟಿದ್ದ. ಮತ್ತೆ ಮದುವೆಯಾಗುವ ಮಾತಿರಲಿ, ಅವನಿಗೆ ಬೇಕಾದಷ್ಟು ಹಣ ಕೊಡುವುದಾಗಿ ಕೊಟ್ಟ ಆಶ್ವಾಸನೆ ಸಹ ಸುಳ್ಳಾಗಿತ್ತು.

ಈ ಎಲ್ಲಾ ಗೊಂದಲಗಳ ದಿನಗಳಲ್ಲಿ ಆರ್ಯ ಸಮಾಜದವರು ಹರಿಲಾಲನ ಉತ್ಸಾಹವನ್ನು ಮತ್ತೆ ಹುರಿದುಂಬಿಸುವ ಎರಡು ವಿಚಾರಗಳನ್ನು ಪ್ರಸ್ತಾಪಿಸಿದಾಗ, ಹರಿಲಾಲ ಮತ್ತೊಮ್ಮೆ ಯೋಚಿಸಿದ. ಬಾ ಅವರು ಕೊನೆಯಲ್ಲಿ ಬರೆದಿದ್ದ ಮಕ್ಕಳು ಮತ್ತು ಅಳಿಯ ತನ್ನಿಂದಾಗಿ ಯಾವ ಸ್ಥಿತಿಯಲ್ಲಿದ್ದಾರೋ ಎಂಬ ವಿಚಾರವನ್ನು ನೆನೆದು ಮತ್ತೆ ಯೋಚಿಸಿದ. ರಾಮಿ, ಕಾಂತಿ ಮತ್ತು ಮನುವಿನ ಕಣ್ಣುಗಳು ತನ್ನ ಮೇಲೆಯೇ ನೆಟ್ಟಿವೆ ಎಂದು ಅವನಿಗೆ ಅನ್ನಿಸಿತು.

* * *

ದಿಲ್ಲಿಯಲ್ಲಿ ಇದೇ ಚಿಂತೆಯಲ್ಲಿ ಕೆಲವು ದಿನಗಳನ್ನು ಕಳೆದ ನಂತರ ಹರಿಲಾಲ ಮುಂಬೈಗೆ ಮರಳಿ ಬಂದ. ಮುಂಬೈಯಲ್ಲಿದ್ದ ಆರ್ಯಸಮಾಜದ ಶಾಖೆಗೆ ದಿಲ್ಲಿಯಲ್ಲಿ ಹರಿಲಾಲನೊಂದಿಗೆ ನಡೆದ ಮಾತುಕತೆಯ ವಿವರಗಳು ಆಗಲೇ ಲಭಿಸಿದ್ದವು. ಈಚೆಗೆ ಹರಿಲಾಲ ಮುಸ್ಲಿಮ್ ಸಂಗಡಿಗರೊಂದಿಗೆ ಸ್ವಲ್ಪ ಹತಾಶನಾಗಿದ್ದಾನೆ ಎಂಬ ವಿಷಯ ತಿಳಿದು ಆರ್ಯಸಮಾಜದ ಸಮರ್ಥಕರು ಉತ್ಸಾಹದಲ್ಲಿದ್ದರು.

ಮುಸ್ಲಿಮ್ ಆಗಿ ಹರಿಲಾಲ ಹೇಳಬೇಕೆಂದಿರುವುದನ್ನು ಹಾಗೂ ಮಾಡಬೇಕೆಂದಿರುವುದನ್ನು, ಮಾಡಿಬಿಟ್ಟಿದ್ದಾನೆ ಎಂದು ಎಲ್ಲರೂ ಯೋಚಿಸುತ್ತಿದ್ದರು. ಒಂದು ವೇಳೆ ಈಗ ಹರಿಲಾಲನನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆ ತಂದರೆ, ಮುಸ್ಲಿಮ್ ಸಂಘಟನೆಗಳಿಂದ ಗೆಲುವು ಸಾಧಿಸಿದಂಥ ಸಂತಸ ಸಿಗುವುದು.

ಹೀಗೆ ಯೋಚಿಸಿದ್ದು ಸರಿಯೆಂದು ಸಾಬೀತಾಯಿತು. ಹರಿಲಾಲನನ್ನು ಮತಾಂತರ ಗೊಳಿಸುವುದರಿಂದ ಇಸ್ಲಾಮ್ ಧರ್ಮ ಲೇಶ ಮಾತ್ರವೂ ಶಕ್ತಿಶಾಲಿಯಾಗುವುದಿಲ್ಲ ಎಂದು ಬಾಪೂ ಅವರು ಮುಸ್ಲಿಮ್ ಸಂಘಟನೆಗಳಿಗೆ ಸ್ಪಷ್ಟಪಡಿಸಿದ್ದು, ಈಗ ಅವರ ಅರಿವಿಗೆ ಬಂದಿತ್ತು. ಇದಕ್ಕೆ ಪ್ರತಿಯಾಗಿ ಈ ಕಾರ್ಯದಿಂದ ತಿಳಿವಳಿಕಸ್ಥ ಮುಸಲ್ಮಾನರು ಮತ್ತು ಇನ್ನಿತರ ಧರ್ಮಗಳ ಬುದ್ಧಿಜೀವಿಗಳಲ್ಲಿ, ಇಂಥ ಹೆಜ್ಜೆಗಳನ್ನಿಡಲು ಹರಿಲಾಲನನ್ನು ಪ್ರೇರೇಪಿಸಿದವರ ಬಗ್ಗೆ ತೀಕ್ಷ್ಣ ಮಾತುಗಳು ಕೇಳಿ ಬರುತ್ತಿದ್ದವು.

ಇವರೆಲ್ಲರೂ ಸ್ವಾರ್ಥ ಮತ್ತು ಹೀನಭಾವನೆಗಳಿಂದ ಆವರಿಸ ಲ್ಪಟ್ಟಿದ್ದರು ಎಂಬ ವಿಚಾರ ಎಲ್ಲರಿಗೂ ತಿಳಿಯಿತು. ಈ ಕಾರಣದಿಂದ ಅವರೆಲ್ಲರೂ ಈಗ ಹರಿಲಾಲನನ್ನು ಅಸಡ್ಡೆಯಿಂದ ಕಾಣುತ್ತಿದ್ದರು.

(ಸಶೇಷ)